# ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.

ಎಸ್.ಸಿ. ಸಂಖ್ಯೆಃ 2-2013 ಸಿಡಬ್ಲ್ಯೂಃ4

ನ್ಯಾಯಾಲಯ ಸಾಕ್ಷಿಃ5

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಅಜರುದ್ದೀನ್ |
| ತಂದೆ ಹೆಸರು | ಃ | ಶಫೀವುದ್ದೀನ್ |
| ವಯಸ್ಸು | ಃ | 28 |
| ವೃತ್ತಿ | ಃ | ವ್ಯವಹಾರ |
| ವಾಸ | ಃ | ಭದ್ರಾವತಿ |

ದಿನಾಂಕಃ05-12-2015 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದ

ಶೌಕಾತ್ ಅಲಿ ಎನ್ನುವವರು ಕಾರು ಚಾಲಕರಾಗಿದ್ದು ಸದ್ರಿಯವರನ್ನು ನಮ್ಮ ಕಾರು ಸಂಖ್ಯೆ ಕೆಎ-05-ಝಡ್-2476 ಇದಕ್ಕೆ ನಾವು ಅವರನ್ನು ಚಾಲಕರನ್ನಾಗಿ ನೇಮಿಸಿದ್ದೆವು. ಸದ್ರಿ ವಾಹನ 2004ನೇ ಸಾಲಿನಲ್ಲಿ ನನ್ನ ತಂದೆ ಹೆಸರಿನಲ್ಲಿತ್ತು. ನನ್ನ ತಂದೆ ಸದ್ರಿ ವಾಹನವನ್ನು ಕೆಲವು ಚಾಲಕರಿಗೆ ಬಾಡಿಗೆ ರೂಪದಲ್ಲಿ ಕೊಡುತ್ತಿದ್ದರು. ಅದರಂತೆ ಶೌಕಾತ್ ಅಲಿ ಕೂಡಾ 2004ನೇ ಸಾಲಿನಲ್ಲಿ ಬಾಡಿಗೆಗೆ ತೆಗೆದುಕೊಂಡು ಹೋಗಿದ್ದರು. ತದ ನಂತರ ಸದ್ರಿ ಶೌಕಾತ್ ಅಲಿ ಸದ್ರಿ ಕಾರಿನಲ್ಲಿ 5 ಜನರನ್ನು ಬಾಡಿಗೆ ರೂಪದಲ್ಲಿ ಕರೆದುಕೊಂಡು ಹೋಗಿದ್ದು ಆಗ ಸದ್ರಿ 5 ಜನರು ಹೊಸಂಗಡಿ ರಸ್ತೆಯ ಬಳಿ ಚಾಲಕನಿಗೆ ಹಲ್ಲೆ ಮಾಡಿ ಕೈಕಾಲುಗಳನ್ನು ಕಟ್ಟಿ ಕಾರನ್ನು ದರೋಡೆ ಮಾಡಿಕೊಂಡ ವಿಷಯ ತಿಳಿಯಿತು. ಶೌಕಾತ್ ಅಲಿಯನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಅಪರಿಚಿತ 5 ಜನರನ್ನು ನಾನು ಪೋಲೀಸರು ವಿಚಾರಿಸುವ ಸಂದರ್ಭದಲ್ಲಿ ನೋಡಿಲ್ಲ. ಸದ್ರಿ ಶೌಕಾತ್ ಅಲಿ 5 ಜನ ಅಪರಿಚಿತ ವ್ಯಕ್ತಿಗಳೊಂದಿಗೆ ಭದ್ರಾವತಿ ಕಾರು ಸ್ಟ್ಯಾಂಡ್‌ನಲ್ಲಿ ಬಾಡಿಗೆ ವ್ಯವಹಾರ ಮಾತನಾಡುತ್ತಿರುವಾಗ ನಾನು ಇರಲಿಲ್ಲ.

(ಈ ಹಂತದಲ್ಲಿ ಅಭಿಯೋಜಕರು ಈ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

ನಾನು ಪೋಲೀಸರ ಮುಂದೆ ದಿಃ1501-2005ರಂದು ನೀಡಿದ ಹೇಳಿಕೆಯಲ್ಲಿ ಈಗ ಓದಿ ಹೇಳಿದಂತೆ ಅಂದರೆ '' ತಾಃ24-12-2004ರಂದು ನಾನು ಭದ್ರಾವತಿ ಸ್ಟ್ಯಾಂಡ್‌ಗೆ ನನ್ನ ಪರಿಚಯದ ಕಾರು ಚಾಲಕ ............... ಅಡ್ವಾನ್ಸ್ ನೀಡಿದರು" ಎಂದು ಹೇಳಿ ಬರೆಸಿದ್ದೇನೆಂದರೆ ಸರಿ ಅಲ್ಲಾ. ಸದ್ರಿ ಹೇಳಿಕೆ ಭಾಗವನ್ನು ನಿಪಿ-12 ಎಂದು ಗುರುತಿಸಲಾಯಿತು.

ಅದೇ ಹೇಳಿಕೆಯಲ್ಲಿ ಅಪರಿಚಿತ 5 ಮಂದಿಯನ್ನು ನಾನು ಬಾಡಿಗೆ ಕಾರು ವಿಚಾರಿಸುವ ಸಮಯ ನೋಡಿದ್ದು ಮುಂದಕ್ಕೆ ನೋಡಿದರೆ ಗುರುತಿಸುತ್ತೇನೆಂದು ಹೇಳಿ ಬರೆಸಿದ್ದೇನೆಂದರೆ ಸರಿ ಅಲ್ಲಾ. ಸದ್ರಿ ಹೇಳಿಕೆ ಭಾಗವನ್ನು ನಿಪಿ-12ಎ ಎಂದು ಗುರುತಿಸಲಾಯಿತು.

ಮೇಲಿನ ವಿಷಯ ಎಲ್ಲಾ ಗೊತ್ತಿದ್ದರೂ ನಾನು ಆರೋಪಿಗಳಿಗೆ ಹೆದರಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲಾ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾ.
ಕುಂದಾಪುರ